# ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ದಾಂಡೇಲಿ

## ಕ್ರಿಮೀನಲ್ ಮೊಕದ್ದಮೆ ನಂ. 50/2022.

**ಚಾಸಾ-47**

**ಪ್ರಾಸಾ-06**

**ದಿನಾಂಕಃ 13-05-2026 ರಂದು ಸತ್ಯ ಪ್ರತಿಜ್ಞೆ ಮೇಲೆ ಸಾಕ್ಷಿಗೆ ಪ್ರಮಾಣ ವಚನವನ್ನು ಭೋಧಿಸಲಾಯಿತು .**

| | |
|---|---|
| ಸಾಕ್ಷಿಯ ಹೆಸರು | ಃ ಲಕ್ಷ್ಮಪ್ಪ ತಂಃ ಲಗಮಪ್ಪ ಪೂಜಾರಿ |
| ವಯಸ್ಸು | ಃ 63 ವರ್ಷ |
| ಉದ್ಯೋಗ | ಃ ನಿವೃತ್ತ ಪಿ.ಎಸ್.ಐ |
| ವಾಸ | ಃ ಗೋಕಾಕ |

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದ.**

1. ನಾನು 2021 ರಿಂದ 2023 ರ ವರೆಗೆ ರಾಮನಗರ ಪೊಲೀಸ್ ಠಾಣೆಯಲ್ಲಿ ಪಿ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.
2. ದಿಃ 13-06-2021 ರಂದು ನನ್ನ ಮೇಲಾಧಿಕಾರಿಗಳ ಆದೇಶದಂತೆ ಈ ಪ್ರಕರಣದ ಕಡತವನ್ನು ಮತ್ತು ನಾಡಬಂದೂಕನ್ನು ಚಾಸಾ-38 ರವರಿಂದ ಪಡೆದಿರುತ್ತೇನೆ.
3. ನಂತರ ಅದೇ ದಿನ ಜೋಯಿಡಾ ಪೊಲೀಸ್ ಠಾಣೆಗೆ ಬಂದು, ಚಾಸಾ-32 ರಿಂದ 35 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ ಹಾಗೂ ಮು.ಮಾ-1 ನಾಡ ಬಂದೂಕನ್ನು ಎಫ್.ಎಸ್.ಎಲ್ ಗೆ ಕಳುಹಿಸಲು ನನ್ನ ಮೇಲಾಧಿಕಾರಿಗಳಿಗೆ ನಿವೇದಿಸಿರುತ್ತೇನೆ. ಅದೇ ರೀತಿ ಮು.ಮಾ-1 ನಾಡ ಬಂದೂಕನ್ನು ಹೊಂದುವ ಪರವಾನಗಿಯನ್ನು ಹೊಂದಿದ ವ್ಯಕ್ತಿಯ ಮಾಹಿತಿಯನ್ನು ಕೋರಿ ಮಾನ್ಯ ಜಿಲ್ಲಾಧಿಕಾರಿಗಳಿಗೆ ನಿವೇದಿಸಿರುತ್ತೆನೆ.
4. ದಿಃ 15-06-2021 ರಂದು ನನ್ನ ಮೇಲಾಧಿಕಾರಿಗಳಿಂದ ಮು.ಮಾ-1 ನಾಡ ಬಂದೂಕನ್ನು ಎಫ್.ಎಸ್.ಎಲ್ ಗೆ ಕಳುಹಿಸಲು ಸೂಕ್ತ ದಾಖಲೆಗಳೊಂದಿಗೆ ಅನುಮತಿ ಬಂದಿರುತ್ತದೆ. ಅದರಂತೆ ಚಾಸಾ-38 ರವರ ಮುಖಾಂತರ ಸದರಿ ನಾಡ ಬಂದೂಕನ್ನು ಎಫ್.ಎಸ್.ಎಲ್

ಗೆ ಕಳುಹಿಸಿರುತ್ತೇನೆ. ಈ ಪ್ರಕರಣದಲ್ಲಿ ನಾಪತ್ತೆಯಾದ ಆರೋಪಿಗಳನ್ನು ಬಂಧಿಸಲು ಸಿಬ್ಬಂದಿಗಳನ್ನು ನೇಮಕ ಮಾಡಿರುತ್ತೇನೆ.

5. ದಿಃ 12-07-2021 ರಂದು ಈ ಪ್ರಕರಣದಲ್ಲಿ ಜಪ್ತುಪಡಿಸಿಕೊಂಡ ವಾಹನದ ವಿವರಗಳನ್ನು ಕೋರಿ ಆರ್.ಟಿ.ಓ ಕಾರವಾರ ರವರಿಗೆ ನಿವೇದನೆಯನ್ನು ಸಲ್ಲಿಸಿರುತ್ತೇನೆ.

6. ದಿಃ 14-07-2021 ರಂದು ನಾನು ನನ್ನ ಸಿಬ್ಬಂದಿಗಳ ಜೊತೆ ಘಟನಾ ಸ್ದಳಕ್ಕೆ ಭೇಟಿ ನೀಡಿರುತ್ತೇನೆ ಮತ್ತು ಸ್ಥಳದ ಮಾಹಿತಿಯನ್ನು ಪಡೆದಿರುತ್ತೇನೆ.

7. ದಿಃ 27-08-2021 ರಂದು ಘಟನಾ ಸ್ಥಳದ ಪಹಣಿ ಪತ್ರಿಕೆಯನ್ನು ಪಡೆದಿರುತ್ತೇನೆ. ಅದೇ ದಿನ ಮಾನ್ಯ ಜಿಲ್ಲಾಧಿಕಾರಿಗಳ ಕಚೇರಿಯಿಂದ ಸದರಿ ಬಂದೂಕಿನ ಪರವಾನಗಿಯನ್ನು ನೀಡಲಾಗಿಲ್ಲ ಎಂಬುದರ ಕುರಿತ ಮಾಹಿತಿಯನ್ನು ಪಡೆದಿರುತ್ತೇನೆ.

8. ದಿಃ 31-08-2021 ರಂದು ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ-48 ರವರಿಗೆ ಹಸ್ತಾಂತರಿಸಿರುತ್ತೇನೆ.

9. ಸಾಕ್ಷಿಯು ದಿಃ 09-06-2021 ರಂದು ಮಾನ್ಯ ಜಿಲ್ಲಾಧಿಕಾರಿಗಳಿಗೆ ನೀಡಿದ ನಿವೇದನೆಯನ್ನು ನೋಡಿ ಗುರುತಿಸಿದ್ದು, ಅದನ್ನು **ನಿಪಿ-10** ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿಪಿ-10(ಎ)** ಎಂದು ಗುರುತಿಸಲಾಯಿತು.

10. ಸಾಕ್ಷಿಯು ದಿಃ 21-08-2021 ರಂದು ಮಾನ್ಯ ಜಿಲ್ಲಾಧಿಕಾರಿಗಳಿಗೆ ನೀಡಿದ ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು **ನಿಪಿ-11** ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿಪಿ-11(ಎ)** ಎಂದು ಗುರುತಿಸಲಾಯಿತು.

11. ಸಾಕ್ಷಿಯು ದಿಃ 15-07-2021 ರಂದು ಆರ್.ಟಿ. ಓ ರವರಿಗೆ ನೀಡಿದ ನಿವೇದನೆಯನ್ನು ನೋಡಿ ಗುರುತಿಸಿದ್ದು, ಅದನ್ನು **ನಿಪಿ-12** ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿಪಿ-12(ಎ)** ಎಂದು ಗುರುತಿಸಲಾಯಿತು.

12. ಸಾಕ್ಷಿಯು ಘಟನಾ ಸ್ಥಳದ ಎರಡು ಪಹಣಿ ಪತ್ರಿಕೆಗಳನ್ನು ನೋಡಿ ಗುರುತಿಸಿದ್ದು, ಅದನ್ನು **ನಿಪಿ-13 ಮತ್ತು ನಿಪಿ-14** ಎಂದು, ಅವುಗಳಲ್ಲಿರುವ ಸಾಕ್ಷಿಯ ಸಹಿಯನ್ನು **ನಿಪಿ-13(ಎ) ಮತ್ತು ನಿಪಿ-14(ಎ)** ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀಮತಿ ಎಸ್.ಎಸ್. ಕೆ ವಕೀಲರಿಂದ**

13. ಆರೋಪಿ ಯಾವುದೇ ತಪ್ಪು ಮಾಡದೆ ಇದ್ದರೂ ಸಹ ಅವನ ವಿರುದ್ಧ ನನ್ನ ಮೇಲಾಧಿಕಾರಿಗಳ ಆದೇಶದಂತೆ ಸುಳ್ಳು ಪ್ರಕರಣ ದಾಖಲಿಸಲಾಗಿದ್ದು, ಅದಕ್ಕೆ ಪೂರವಾಗಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿರುವ ಮುದ್ದೆ ಮಾಲಗಳಿಗೂ ದ್ವಿ ಚಕ್ರ ವಾಹನಕ್ಕೂ ಮತ್ತು ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

14. ನಾನು ಯಾವುದೇ ಸಾಕ್ಷಿದಾರರ ಹೇಳಿಕೆಗಳನ್ನು ಪಡೆದಿಲ್ಲ ಎಂದರೆ ಸರಿಯಲ್ಲ. ಮು.ಮಾ-1 ನ್ನು ಎಫ್.ಎಸ್.ಎಲ್ ಗೆ ಕಳುಹಿಸಿಲ್ಲ ಎಂದರೆ ಸರಿಯಲ್ಲ. ಆರೋಪಿ ಕಾಣೆಯಾಗಿದ್ದ ಮತ್ತು ಅವನನ್ನು ಹಿಡಿಯಲು ಸಿಬ್ಬಂದಿಗಳನ್ನು ನೇಮಕ ಮಾಡಿದ್ದೆ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

15. ಅದೇ ರೀತಿ ಮಾನ್ಯ ಜಿಲ್ಲಾಧಿಕಾರಿಗಳು ಮತ್ತು ಆರ್.ಟಿ.ಓ ಹತ್ತಿರ ಮಾಹಿತಿ ಕೋರಿ ನಿವೇದನೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಘಟನಾ ಸ್ಥಳಕ್ಕೆ ಬೇಟಿ ನೀಡಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

16. ನಾನು ಘಟನಾ ಸ್ಥಳದ ಯಾವುದೇ ಪಹಣಿ ಪತ್ರಿಕೆಗಳನ್ನು ಪಡೆದಿಲ್ಲ ಎಂದರೆ ಸರಿಯಲ್ಲ. ದೂರುದಾರರು ನಮ್ಮ ಮೇಲಾಧಿಕಾರಿಗಳು ಆದ ಕಾರಣ, ಅವರಿಗೂ ಅನುಕೂಲವಾಗಲೇಂದು ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಾ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ. ಸರಿ ಇದೆ**

**ಸಹಿ ಇದೆ/-**

**(ತೇಜಸ್ವಿನಿ ಸೊಗಲದ)**

**ದಿವಾಣಿ ನ್ಯಾಯಾಧೀಶರು ಮತ್ತು**

**ಪ್ರ.ದ.ನ್ಯಾ. ದಂಡಾಧಿಕಾರಿಗಳು,ದಾಂಡೇಲಿ.**